
ಕಥೆ





**ಮುನವ್ವರ್ ಜೋಗಿಬೆಟ್ಟು**

ಕಲೆ: ರಾಮಕೃಷ್ಣ ಸಿದ್ರಪಾಲ

ವೆಂಟಿಲೇಟರ್ ಮಶೀನ್‌ಗಳ ಸದ್ದಿಗೆ ತಲೆ ನೋವು ಪ್ರಾರಂಭವಾಗಿ ನಾನು ಗಡಿಯಾರದ ಕಡೆಗೊಮ್ಮೆ ನೋಡಿದೆ. ಅವಳು ನನ್ನನ್ನು ನಿಲ್ಲಿಸಿ ಸ್ನಾನಕ್ಕೆಂದು ಹೋಗಿ ಗಂಟೆ ಒಂದು ಕಳೆದಿತ್ತು. ಸ್ನಾನಕ್ಕೆ ಹೋದರೆ ಅವಳು ಸಮಯ ವ್ಯರ್ಥ ಮಾಡುವವಳಲ್ಲ. ಅದೂ ಈ ಜಗವರಿಯದೆ ಮೂಗು ಬಾಯಿಗೆ ವೈರು ಹಾಕಿ ಮಲಗಿದ ಕರುಳ ಕುಡಿಯನ್ನು ಈ ಸಂದಿಗ್ಧತೆಯಲ್ಲಿ ಬಿಟ್ಟು. ಫ್ಲುಯಿಡ್ ಮೆಲ್ಲನೆ ಇಳಿದು ಪೈಪ್ ಮೂಲಕ ಜಾರಿ ತೊಡೆಯಲ್ಲಿ ತೂತು ಮಾಡಿದ್ದ ಸೂಜಿಯ ಮೂಲಕ ಮಗನ ದೇಹ ಹೊಕ್ಕುತ್ತಿತ್ತು. ಬಹುಶಃ ಬಟ್ಟೆ ಒಗೆಯಲಿರಬಹುದು. ಒಗೆಯುವುದೆಂದರೆ ಆಸ್ಪತ್ರೆಯ ಸಣ್ಣ ಬಾತ್ರೂಂನಲ್ಲಿ ಹೇಗೆ ಸಾಧ್ಯ. ಬಕೆಟಿಗೆ ನೀರು ಬಿಟ್ಟು ಸ್ವಲ್ಪ ಸರ್ಫು ಹಾಕಿ ನೆನಿಸಿ ಹೆಚ್ಚೆಂದರೆ ಕಾಲಿನಲ್ಲಿ ಮನಸ್ಸು ಸಮಾಧಾನವಾಗುವವರೆಗೂ ನೋವುಗಳಂತೆ ಮೆಟ್ಟಿ ಮತ್ತೆ ನೀರಿನಲ್ಲಿ ಅದ್ದಿ ಹಿಂಡಿ ಆಸ್ಪತ್ರೆಯ ಹೊರ ಗೋಡೆಯ ಮೇಲೆ ಬಿಸಿಲಿಗೆ ಒಣಗಲು ಹಾಕಬಹುದು. ಮಾತ್ರ ಹೃದಯ, ಎಷ್ಟು ಮೆಟ್ಟಿದರೂ ನೋವುಗಳನ್ನು ಮೆಟ್ಟಿ ನಿಲ್ಲುವಷ್ಟು ಶಕ್ತಿ ಎಲ್ಲಿಂದ ಬಂದೀತು.

ಪಿಐಸಿಯುವಿನ ಎಸಿಯ ಕುಳಿರ್ಗಾಳಿಗೆ ನಾನು ಥಂಡಿ ಹಿಡಿದು ಅವಳಿಗಾಗಿ ಕಾಯುತ್ತಾ ಕುಳಿತೆ. ಆ ಚಳಿಗೆ ಹೇಗೆ ಒಗ್ಗಿಕೊಳ್ಳಬಲ್ಲೆ ಎಂದು ಪರಿತಪಿಸುತ್ತಿರುವಾಗ ನನ್ನೆದುರಲ್ಲೇ ನಿಶ್ಚಲವಾಗಿ ಮಲಗಿರುವ ಮಗುವಿನ ಮುಖವನ್ನು ಕಂಡು ಹಾಗೆಯೇ ಪರಿಸ್ಥಿತಿ ಮರೆಯತೊಡಗಿದೆ. ಎರಡೇ ದಿನದ ಜ್ವರಕ್ಕೆ ಉಸಿರಾಟದಲ್ಲಿ ಏರುಪೇರು. ಅಬ್ಬಾ ನೆನೆದರೆ ಮತ್ತಷ್ಟು ಕುಸಿಯಬಹುದೆಂದು ನೆನೆದು ಯೋಚಿಸುವುದನ್ನೇ ಬಿಟ್ಟು ಸುಮ್ಮನೆ ಸುತ್ತಲ ಪರಿಸ್ಥಿತಿಯನ್ನೊಮ್ಮೆ ಅವಲೋಕಿಸಿದೆ. ಬೆಳ್ಳಿ ನಗುವಿನ ಹತ್ತಾರು ಹೂವುಗಳು ಅಲ್ಲಿ ಮಲಗಿ ವೆಂಟಿಲೇಟರಿನ ಹಿಂಸೆಗೆ ಬಾಡಿ ಹೋಗುತ್ತಿದ್ದವು. ಆಯಾಚಿತವಾಗಿ ಕಣ್ಣುಗಳು ಮಲಗಿದ್ದ ಆ ಹೆಣ್ಣು ಮಗುವಿನ ಕಡೆಗೆ ಹಾಯಿತು. ಕೆರೆಯ ನೈದಿಲೆಯಂತಹ ಹೂ ಮೊಗದ ಹೆಣ್ಣು ಮಗು ನಿನ್ನೆ ರಾತ್ರಿ ಈ ಹೂದೋಟಕ್ಕೆ ಬಂದು ಮಲಗಿತ್ತು. ಉಸಿರಿಗಾಗಿ ಏಗುತ್ತಿರುವ ಮಗುವಿನ ಕೈಗಳಲ್ಲಿ ಗ್ಲೂಕೋಸು ವೈರುಗಳು ಜೀವ ಹನಿಯನ್ನು ತುಂಬುತ್ತಿದ್ದವು.

ಈಗ ಆ ಮಗುವನ್ನು ನೋಡಿದರೆ ನನ್ನ ಕರುಳು ಚುರ್ ಅಂದಿತ್ತು. ಅಷ್ಟರಲ್ಲಿ ಸ್ನಾನ ಮುಗಿಸಿ ಬಂದವಳು, ಕೈ ಸನ್ನೆಯಲ್ಲೇ ಹೊರ ಬನ್ನಿ ಅಂತ ಗಾಜಿನ ಕಿಟಕಿಯಲ್ಲಿ ಕರೆದಿದ್ದಳು. ಹೊರಡುವಾಗ ಹೂ ಮೊಗದ ಮಗುವಿನ ಮುಖ ನೋಡುತ್ತಾ ಬೆಡ್ ಬದಿಯಲ್ಲಿ ಕುಳಿತಿದ್ದ ನಾನು ಎದ್ದು ಹೊರ ಬಂದೆ. 'ಯಾರಾದರೂ ಒಬ್ರು ಒಳ ಹೋಗಿ' ಎಂದು ಬಾಗಿಲ ಬಳಿ ನಮ್ಮಿಬ್ಬರನ್ನು ಕಂಡ ಸೆಕ್ಯೂರಿಟಿ ಆಸ್ಪತ್ರೆಯ ನಿಯಮವನ್ನು ಎಚ್ಚರಿಸಿದ.

'ಛೇ ...ಪಾಪ ಆ ಮಗುವಿನದ್ದು ರೇಪ್ ಅಂತೆ' ಅವಳು ಧ್ವನಿ ತಗ್ಗಿಸಿ ಬೇಸರದಿಂದಲೇ ಅಂದಳು.